BKN-33-III

Sl.No. :

Total No. of Pages : 3

ತೃತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್- 2025

(SLM Scheme)

ಐಚ್ಛಿಕ ಕನ್ನಡ : (ಪತ್ರಿಕೆ–೩)

ಹಳಗನ್ನಡ ಪಠ್ಯಗಳು ಮತ್ತು ಛಂದಸ್ಸು

(ವಡ್ಡಾರಾಧನೆ, ರನ್ನನ ಗದಾಯುದ್ಧ ಸಂಗ್ರಹ, ಛಂದಸ್ಸು)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು) (20 ಅಂಕಗಳು)

ಪ್ರ1) ಎರಡು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಹೆಸರಿಸಿ: **[2×5=10]**

೧) ಪಂಕಜಮುಂ ಸುಹೃದ್ವದನ ಪಂಕಜಮುಂ ಮುಗಿವನ್ನಮುಗ್ರ ತೇ
ಜಂ ಕಿಡುತಿರ್ಪಿನಂ ನಿಜಕರಂಗಳನಂದು ಡುಗುತ್ತುಮಿರ್ದು ಚ

೨) ಕುಳಿರ್ವ ಪೂಗೊಳಂಗಳಲ್ಲಿ
ತಳಿರ ಕಾವಣಂಗಳಲ್ಲಿ

೩) ಮಳೆ ಬರುವ ಕಾಲಕ ಒಳಗ್ಯಾಕ ಕೂತೇವು
ಇಳೆಯೊಳಗ ಜಳಕಾ ಮಾಡೇವು ನಾವೂನು
ಮೋಡಗಳ ಆಟ ಆಡೋಣ

೪) ಮೆರೆಯುತ್ತಿದ್ದ ಭಾಗ್ಯವೆಲ್ಲ
ಹರಿದು ಹೋಯಿತೆನುತ ತಿರುಕ
ಮರಳಿನಾಚೆ ಪೋಗುತಿದ್ದ ಮರುಳನಂತೆಯೇ॥

ಪ್ರ2) ಒಂದರ ಭಾವ ಸ್ವಾರಸ್ಯವನ್ನು ಬರೆಯಿರಿ: **[1×4=4]**

೧) ಭಟಾರರೆಂದರಬ್ಬಾ ಮನೆಯಂ ಪೊಕ್ಕು ಬಂದೊಮಿನ್ನೆಮಗೆ
ನಿಲಲಾಗದೆಂದೊಡರಿಯಿಂತೆಂದಳ್ ಭಟರಾ ನೀಮೆನಗೆ
ದಯೆಗೆಯ್ದಮೋಘಂ ನೀಲಲ್ವೇಟ್ಕುಮೆಂದು ಪೋಗಲೀಯದೆ
ಕಾಲಂ ಪಿಡಿದು ತಾಂಗುತ್ತಿರ್ಪನ್ನೆಗಮ್

೨) ಆ ರವಮಂ ನಿರ್ಜಿತಕಂ।
ಠೀರವರವಮಂ ನಿರಸ್ತಘನರವಮಂ ಕೋ॥
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ

ಪ್ರ3) <u>ನಾಲ್ಕು</u> ಪದಗಳಿಗೆ ಅರ್ಥ ಬರೆಯಿರಿ: **[4×½=2]**

ತಳಾಱ, ಬಸದಿ, ಪೊಟಿಲು, ಕಟಕ, ಪಟ್ಟವರ್ಧನ, ಕೊಂತಂ ದೂಸಿಗ, ಕೆಳೆಯ.

ಪ್ರ4) ಎರಡನ್ನು ಸಂದರ್ಭ ಸಹಿತ ವಿವರಿಸಿ: **[2×2=4]**

೧) ನಿಮ್ಮ ತಂದೆಯಪ್ಪೆಮ್ಮಜ್ಜನೊಳನೊ ಇಲ್ಲೆಯೊ

೨) ಪೂಣ್ದಪ್ರತಿಜ್ಞೆಯಂ ನೆನೆವೆಯೋ ನೆನೆಯೆಯೋ

೩) ಒಡಲೊಡಮೆಯೆಂಬಿವೆರಡುಂ ಕೆಡಲಿರ್ಪುವು

೪) ಸತ್ತ ಮಗಂದಿರ್ ಸತ್ತರ್

<u>ವಿಭಾಗ–ಬಿ</u>

(ಛಂದಸ್ಸು) (30 ಅಂಕಗಳು)

ಪ್ರ5) <u>ಒಂದು</u> ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಪ್ರಾಸ ಎಂದರೇನು? ಪ್ರಾಸದ ಪ್ರಮುಖ ಬಗೆಗಳನ್ನು ಸೋದಾಹರಣವಾಗಿ ವಿಶದಪಡಿಸಿ.

೨) ಖ್ಯಾತ ಕರ್ಣಾಟಕಗಳು ಎಷ್ಟು? ಚಂಪಕಮಾಲೆ ಮತ್ತು ಉತ್ಪಲಮಾಲೆ ವೃತ್ತಗಳ ಲಕ್ಷಣವನ್ನು ಸೋದಾಹರಣವಾಗಿ ನಿರೂಪಿಸಿ.

ಪ್ರ6) <u>ಒಂದು</u> ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಸಾಂಗತ್ಯದ ಲಕ್ಷಣ ಮತ್ತು ಇತಿಹಾಸವನ್ನು ವಿವರಿಸಿ.

೨) ಹೊಸಗನ್ನಡ ಛಂದಸ್ಸಿನ ಹಿನ್ನೆಲೆ ಹಾಗೂ ಹೊಸಗನ್ನಡದ ವಿವಿಧ ಬಗೆಯ ಲಯಗಳನ್ನು ಸೋದಾಹರಣವಾಗಿ ವಿವರಿಸಿ.

ಪ್ರ7) ಎರಡಕ್ಕೆ ಟಿಪ್ಪಣಿ ಬರೆಯಿರಿ. **[2×5=10]**

೧) ಯತಿ

೨) ಕಂದ

೩) ಚೌಪದಿ

೪) ಪದ್ಮಗಣ

ವಿಭಾಗ–ಸಿ

(ಹಳಗನ್ನಡ ಪಠ್ಯಗಳು : ವಡ್ಡಾರಾಧನೆ ಮತ್ತು ಗದಾಯುದ್ಧ ಸಂಗ್ರಹ) (30 ಅಂಕಗಳು)

ಪ್ರ8) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಅಗ್ನಿರಾಜನ ನಿಷಿದ್ಧ ವೈವಾಹಿಕ ಸಂಬಂಧ ಕಾರ್ತಿಕನ ಬದುಕಿನ ಮೇಲೆ ಉಂಟುಮಾಡಿದ ಪರಿಣಾಮವನ್ನು ವಿವರಿಸಿ.

೨) ವಿದ್ಯುಚ್ಚೋರನ ಕಳ್ಳತನ ಹಾಗೂ ಇದಕ್ಕೆ ಕಾರಣವಾದ ವಿದ್ಯುಚ್ಚೋರ ಹಾಗೂ ಯಮದಂಡನ ಗೆಳೆತನವನ್ನು ವಿವರಿಸಿ.

ಪ್ರ9) ಒಂದಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ವೀರಶ್ರೀ

೨) ವಡ್ಡಾರಾಧನೆಯ ಕರ್ತೃ

ಪ್ರ10) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ರನ್ನನ 'ಗದಾಯುದ್ಧಂ' ಮೇಲೆ ಪಂಪನ 'ವಿಕ್ರಮಾರ್ಜುನ ವಿಜಯಂ' ಕಾವ್ಯದ ಪ್ರಭಾವ–ಪ್ರೇರಣೆಗಳನ್ನು ನಿರೂಪಿಸಿ.

೨) 'ಭೀಮನನ್ನು ಇಳಿಸಿಲ್ಲ, ದುರ್ಯೋಧನನನ್ನು ಏರಿಸಿದ್ದಾನೆ' ಎಂಬ ಮಾತಿನ ಹಿನ್ನೆಲೆಯಲ್ಲಿ ದುರ್ಯೋಧನನ ವ್ಯಕ್ತಿತ್ವವನ್ನು ಪರಿಚಯಿಸಿ.

ಪ್ರ11) ಒಂದಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ದ್ರೌಪದಿ

೨) ಸಂಜಯ